# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಹೆಚ್ ರಸ್ತೆ, ತುಮಕೂರು -572103

ಸಂಖ್ಯೆ:ತುವಿ:ಶೈವಿ:2026-27:397 ದಿನಾಂಕ:30.04.2026

## ಸುತ್ತೋಲೆ

ವಿಷಯ:- ವಿವಿಧ ಸ್ನಾತಕ ಪದವಿ ಕೋರ್ಸುಗಳ ಪಠ್ಯಕ್ರಮವನ್ನು ರಚಿಸಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವ ಕುರಿತು.

ಉಲ್ಲೇಖ:-1) ವಿವಿ ಅಧಿಸೂಚನೆ ಪತ್ರ ಸಂಖ್ಯೆ: ಸಂಖ್ಯೆ:ತುವಿ:ಶೈವಿ:2026-27/395 ದಿನಾಂಕ:29.04.2026.
2)ವಿವಿ ಅಧಿಸೂಚನೆ ಪತ್ರ ಸಂಖ್ಯೆ: ಸಂಖ್ಯೆ:ತುವಿ:ಶೈವಿ:2026-27/396 ದಿನಾಂಕ:29.04.2026.
3) ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:30.04.2026

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(01) ಮತ್ತು (02)ರ ಅಧಿಸೂಚನೆಗಳನ್ವಯ ವಿವಿಧ ಸ್ನಾತಕ ಪದವಿ ಕೋರ್ಸುಗಳಿಗೆ ಪ್ರೋಗ್ರಾಂ ವಿನ್ಯಾಸವನ್ನು ಅಧಿಸೂಚಿಸಲಾಗಿರುತ್ತದೆ. ಆದ್ದರಿಂದ ಸಂಬಂಧಪಟ್ಟ ಸ್ನಾತಕ ವಿಷಯಗಳ ಅಧ್ಯಯನ ಮಂಡಳಿಗಳು ಸದರಿ ಪ್ರೋಗ್ರಾಂ ವಿನ್ಯಾಸಗಳನ್ನು ಪರಿಶೀಲಿಸಿ ಸಭೆಯನ್ನು ನಡೆಸಿ 2026-27ನೇ ಶೈಕ್ಷಣಿಕ ಸಾಲಿನಿಂದ ಅನ್ವಯವಾಗುವಂತೆ 5ನೇ ಮತ್ತು 6ನೇ ಸೆಮಿಸ್ಟರ್‌ಗಳ ಪಠ್ಯಕ್ರಮಗಳನ್ನು ರಚಿಸಿ **ದಿನಾಂಕ:20.05.2026 ಬುಧವಾರದ ಒಳಗೆ** ದೃಢೀಕೃತ ಪ್ರತಿಯನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವಂತೆ ಈ ಮೂಲಕ ತಿಳಿಸಲಾಗಿದೆ. (Soft copy & Signed Scan copy ಯನ್ನು dracademictut@gmail.com ಗೆ ಇ-ಮೇಲ್ ಕಳುಹಿಸುವುದು)

**ವಿಶೇಷ ಸೂಚನೆ:** i) 1 ರಿಂದ 4ನೇ ಸೆಮಿಸ್ಟರ್‌ನ ಪಠ್ಯಕ್ರಮಗಳನ್ನು ಈಗಾಗಲೇ ಅಧ್ಯಯನ ಮಂಡಳಿಗಳು ರಚಿಸಿ ಸಲ್ಲಿಸಲಾಗಿದ್ದು, ಸದರಿ ಪಠ್ಯಕ್ರಮಗಳನ್ನು ಸಕ್ಷಮ ಪ್ರಾಧಿಕಾರಗಳು ಅನುಮೋದಿಸಿದ್ದು, ಈಗಾಗಲೇ ಸದರಿ ಪಠ್ಯಕ್ರಮಗಳು ಅನುಷ್ಠಾನಗೊಂಡಿರುತ್ತದೆ. ಆದ್ದರಿಂದ 1 ರಿಂದ 4ನೇ ಸೆಮಿಸ್ಟರ್‌ನ ಪಠ್ಯಕ್ರಮಗಳನ್ನು ಮತ್ತೊಮ್ಮೆ ರಚಿಸಲು/ ಪರಿಷ್ಕರಿಸಲು ಅವಕಾಶವಿರುವುದಿಲ್ಲ. ಒಂದು ವೇಳೆ ಪರಿಷ್ಕರಿಸುವಂತಹ ಅವಶ್ಯಕತೆಯಿದ್ದಲ್ಲಿ ಸೂಕ್ತ ಕಾರಣದೊಂದಿಗೆ ಪಠ್ಯಕ್ರಮವನ್ನು ಪರಿಷ್ಕರಿಸಲು ಮನವಿಯನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸತಕ್ಕದ್ದು.

ii) ಉಲ್ಲೇಖ 1) ಮತ್ತು 2)ರ ಪ್ರೋಗ್ರಾಂ ವಿನ್ಯಾಸಗಳ 5ನೇ ಮತ್ತು 6ನೇ ಸೆಮಿಸ್ಟರ್‌ಗಳಿಗೆ ಒಂದೇ ಪಠ್ಯಕ್ರಮ ಅನ್ವಯಿಸುತ್ತದೆ. ಎರಡು ಪ್ರತ್ಯೇಕ ಪಠ್ಯಕ್ರಮಗಳನ್ನು ರಚಿಸುವಂತಿಲ್ಲ.

iii) ಉಲ್ಲೇಖ 1) ಮತ್ತು 2)ರ ಪ್ರೋಗ್ರಾಂ ವಿನ್ಯಾಸಗಳನ್ನು ಅರ್ಥೈಯಿಸಿಕೊಳ್ಳಲು ಗೊಂದಲವಿದ್ದರೆ ಅಧ್ಯಯನ ಮಂಡಳಿಯ ಸಭೆಯನ್ನು ಕರೆಯುವ ಮೊದಲು ಮಂಡಳಿಯ ಅಧ್ಯಕ್ಷರು ಶೈಕ್ಷಣಿಕ ವಿಭಾಗದಿಂದ ಅಗತ್ಯ ಮಾಹಿತಿಯನ್ನು ಪಡೆದುಕೊಂಡು ಗೊಂದಲವನ್ನು ನಿವಾರಿಸಿಕೊಂಡ ನಂತರ ಸಭೆಯನ್ನು ಕರೆಯುವುದು.

ಆದೇಶದ ಮೇರೆಗೆ

ಉಪಕುಲಸಚಿವರು

ಉಪಕುಲಸಚಿವರು
ಶೈಕ್ಷಣಿಕ ವಿಭಾಗ
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಗೆ

1. ಅಧ್ಯಕ್ಷರು ಮತ್ತು ಸಂಚಾಲಕರುಗಳು, ವಿವಿಧ ವಿಷಯಗಳ ಸ್ನಾತಕ ಅಧ್ಯಯನ ಮಂಡಳಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು – ಎಲ್ಲಾ ಸ್ನಾತಕ ಅಧ್ಯಯನ ಮಂಡಳಿಯ ಅಧ್ಯಕ್ಷರು ಮತ್ತು ಸದಸ್ಯರುಗಳಿಗೆ ಸುತ್ತೋಲೆಯನ್ನು ಇ-ಮೇಲ್ ಮುಖಾಂತರ ಕಳುಹಿಸುವುದು.

ಪ್ರತಿಗಳು:

1. ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಮಾನ್ಯ ಕುಲಪತಿಯವರ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
4. ಕಛೇರಿ ಪ್ರತಿ.